ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಜ್ಞಾನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 26.12.2018

## ಪ್ರಕಟಣೆಯ ಕೃಪೆಗಾಗಿ

# ವಿಜ್ಞಾನಕ್ಕೆ ಸಂಸ್ಕೃತದ ಕೊಡುಗೆ ಅಪಾರ

– ಡಾ. ಡಿ. ಶೀಲಾ ಕುಮಾರಿ

"ಸಂಸ್ಕೃತ ಭಾಷೆಯು ಬಹಳ ಪ್ರಾಚೀನವಾದುದು, ಪ್ರಪಂಚದಾದ್ಯಂತ ಉಪಯೋಗಿಸುತ್ತಿರುವ ಭಾಷೆಗಳಲ್ಲಿ ಸಂಸ್ಕೃತ ಭಾಷೆಯು ಒಂದಾಗಿದ್ದು, ಕ್ರಿಸ್ತಪೂರ್ವದಿಂದಲೂ ತನ್ನ ಸ್ಥಾನ ಮಾನ ಉಳಿಸಿಕೊಂಡು ಬಂದಿದೆ" ಎಂದು ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಡಿ. ಶೀಲಾಕುಮಾರಿಯವರು ಹೇಳಿದರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ.26.12.2018 ರಂದು ಸಂಸ್ಕೃತ ವಿಭಾಗದ ವತಿಯಿಂದ ಆಯೋಜಿಸಿದ್ದ ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು 'ಸಂಸ್ಕೃತದಲ್ಲಿ ವಿಜ್ಞಾನ' ಎಂಬ ವಿಷಯ ಕುರಿತು ಮಾತನಾಡಿದರು. "ವಿಜ್ಞಾನ ಎಂದರೆ ವಿಶೇಷ-ಜ್ಞಾನ. ವಿಜ್ಞಾನವು ವೇದಗಳ ಕಾಲದಿಂದಲೂ ಬಳಕೆಯಲ್ಲಿದೆ. ಪಾಣಿನಿಯ ವ್ಯಾಕರಣ ಸೂತ್ರಗಳು ಹೇಗೆ ಉಲ್ಲೇಖ ವಾಗಿದೆಯೋ ಹಾಗೆ ಯಥಾವತ್ತಾಗಿ ಇಂದಿಗೂ ಬಳಕೆಯಲ್ಲಿವೆ. ತರ್ಕಶಾಸ್ತ್ರದ ಪಿತಾಮಹನಾದ ಕಣಾದ ಮಹರ್ಷಿ ವ್ಯಾಕರಣ ಹಾಗೂ ತರ್ಕಶಾಸ್ತ್ರವು ಎಲ್ಲಾ ಶಾಸ್ತ್ರಗಳಿಗೂ ಉಪಕಾರಕಗಳಾಗಿವೆ ಎಂದು ಹೇಳಿದ್ದಾನೆ. ಋಗ್ವೇದದಲ್ಲಿ ನಮ್ಮ ಪ್ರಾಚೀನರು ಸೌರಮಂಡದಲ್ಲಿರುವ ಗ್ರಹಗಳ ಉಲ್ಲೇಖ, ಭೂಮಿಯ ಗುರುತ್ವಾಕರ್ಷಣಬಲ ಇತ್ಯಾದಿಗಳ ಬಗ್ಗೆ ನಿಖರವಾಗಿ ತಿಳಿಸಿದ್ದಾರೆ. ನಮ್ಮ ಪ್ರಾಚೀನರು ಸಸ್ಯ ಹಾಗೂ ಪ್ರಾಣಿಗಳನ್ನು ಅವುಗಳ ಗುಣವನ್ನಾವಲಂಬಿಸಿ ವರ್ಗೀಕರಣ ಮಾಡಿ ಅದಕ್ಕಾಗಿಯೇ ಅಶ್ವಶಾಸ್ತ್ರ, ಗಜಶಾಸ್ತ್ರ, ವೃಕ್ಷಾಯುರ್ವೇದಃ ಎಂಬ ಗ್ರಂಥವನ್ನು ರಚಿಸಿದ್ದಾರೆ. ಇವುಗಳೆಲ್ಲವು ಸಂಸ್ಕೃತ ಭಾಷೆಯಲ್ಲಿದ್ದು, ವಿಜ್ಞಾನಕ್ಕೆ ಕೊಡುಗೆಯಾಗಿವೆ" ಎಂದು ತಿಳಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್‌ರವರು ಮಾತನಾಡುತ್ತಾ, "ಸಂಸ್ಕೃತ ಎಂದರೆ ವಿಜ್ಞಾನ. ಸಂಸ್ಕೃತ ಭಾಷೆಯಲ್ಲಿ ಎಲ್ಲ ವಿಷಯಗಳು ಅಡಕವಾಗಿವೆ. ಕುರುಕ್ಷೇತ್ರದಲ್ಲಿ ನಡೆಯುತ್ತಿದ್ದ ಎಲ್ಲ ಸಂಗತಿಗಳನ್ನು ಸಂಜಯನು ತನ್ನ ದೂರದೃಷ್ಟಿಯ ಮೂಲಕ ರಾಜನಾದ ಧೃತರಾಷ್ಟ್ರನಿಗೆ ವಿವರಿಸುತ್ತಿದ್ದನು. ಪ್ರಾಚೀನ ಕಾಲದಲ್ಲಿ ಭಾಸ್ಕರಚಾರ್ಯರು ತನ್ನ ಮಗಳಾದ ಲೀಲಾವತಿಯ ಹೆಸರನ್ನು ಲೀಲಾವತಿಗಣಿತ ಎಂಬ ಗ್ರಂಥವನ್ನು ರಚಿಸಿ, ಅದರಲ್ಲಿರುವ ಜೋತಿಷ್ಯದ ಮಹತ್ವವನ್ನು ತಿಳಿಸಿದರು" ಎಂದು ಹೇಳಿದರು.

ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪರವರು ಅಧ್ಯಕ್ಷೀಯ ಭಾಷಣವನ್ನು ಮಾತನಾಡುತ್ತಾ "ಸಂಸ್ಕೃತ ಭಾಷೆಯು ವ್ಯವಹಾರಿಕ ಭಾಷೆಯಾಗಿ ಬಳಕೆಯಾಗಬೇಕು. ಅದರ ಮಹತ್ವವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಸಂಸ್ಕೃತ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ವಿದ್ಯಾರ್ಥಿಗಳು ಸಂಸ್ಕೃತಾಧ್ಯಯನಕ್ಕೆ ಒತ್ತು ಕೊಟ್ಟು, ನಿತ್ಯೋಪಯೋಗಿ ಭಾಷೆಯನ್ನಾಗಿ ಬಳಸಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ವಿಶ್ವನಾಥ್ ರವರು ಸ್ವಾಗತ ಕೋರಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾದ ಕು. ಕಾವ್ಯ ವಂದನಾರ್ಪಣೆಯನ್ನು ಮಾಡಿದರು. ಗುರುಕುಲದ ಸಾಧಕರು ಮತ್ತು ಪಿಯುಸಿ ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಸ್ಕೃತ ವಿಭಾಗದ ಉಪನ್ಯಾಸಕಿಯಾದ ಡಾ. ಎಂ.ಎಸ್. ಕೋಮಲ ರವರು ನಡೆಸಿಕೊಟ್ಟರು. ಮಾತೃಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

(ಪ್ರೊ. ಎಂ. ಮಹದೇವಪ್ಪ)
**ಪ್ರಾಂಶುಪಾಲರು**

ಗೆ

ಸಂಪಾದಕರು / ವರದಿಗಾರರು

\- - - - - - - - - - - - - -

\- - - - - - - - - - - - - -

ಕನ್ನಡ ಪ್ರಭ 29-12-2018

# ವಿಜ್ಞಾನಕ್ಕೆ ಸಂಸ್ಕೃತದ ಕೊಡುಗೆ ಅಪಾರ: ಶೀಲಾಕುಮಾರಿ

## ಕ್ರಿಸ್ತ ಪೂರ್ವದಿಂದಲೂ ತನ್ನ ಸ್ಥಾನಮಾನ ಉಳಿಸಿಕೊಂಡಿದೆ: ಅಭಿಮತ | ಸಂಸ್ಕೃತೋತ್ಸವ, ವಿಶೇಷ ಉಪನ್ಯಾಸ

ಮೈಸೂರು: ಸಂಸ್ಕೃತ ಭಾಷೆಯು ಬಹಳ ಪ್ರಾಚೀನವಾದುದು, ಪ್ರಪಂಚದಾದ್ಯಂತ ಉಪಯೋಗಿಸುತ್ತಿರುವ ಭಾಷೆಗಳಲ್ಲಿ ಸಂಸ್ಕೃತ ಭಾಷೆಯು ಒಂದಾಗಿದ್ದು, ಕ್ರಿಸ್ತ ಪೂರ್ವದಿಂದಲೂ ತನ್ನ ಸ್ಥಾನಮಾನ ಉಳಿಸಿಕೊಂಡು ಬಂದಿದೆ ಎಂದು ಮಹಾರಾಣಿ ವಿಜ್ಞಾನ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕಿ ಡಾ. ಡಿ. ಶೀಲಾಕುಮಾರಿ ಹೇಳಿದರು.

ನಗರದ ಬಿ.ಎನ್. ರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸಂಸ್ಕೃತ ವಿಭಾಗದ ವತಿಯಿಂದ ಆಯೋಜಿಸಿದ್ದ ಸಂಸ್ಕೃತೋತ್ಸವ ಮತ್ತು ವಿಶೇಷಉಪನ್ಯಾಸಕಾರ್ಯಕ್ರಮದಲ್ಲಿ 'ಸಂಸ್ಕೃತದಲ್ಲಿ ವಿಜ್ಞಾನ' ಎಂಬ ವಿಷಯ ಕುರಿತು ಅವರು ಮಾತನಾಡಿದರು.

ವಿಜ್ಞಾನ ಎಂದರೆ ವಿಶೇಷ-ಜ್ಞಾನ. ವಿಜ್ಞಾನವು ವೇದಗಳ ಕಾಲದಿಂದಲೂ ಬಳಕೆಯಲ್ಲಿದೆ. ಪಾಣಿನಿಯ ವ್ಯಾಕರಣ ಸೂತ್ರಗಳು ಹೇಗೆ ಉಲ್ಲೇಖವಾಗಿದೆಯೋ ಹಾಗೆ ಯಥಾವತ್ತಾಗಿ ಇಂದಿಗೂ ಬಳಕೆಯಲ್ಲಿವೆ. ತರ್ಕಶಾಸ್ತ್ರದ ಪಿತಾಮಹನಾದ ಕಣಾದ ಮಹರ್ಷಿ ವ್ಯಾಕರಣ ಹಾಗೂ ತರ್ಕಶಾಸ್ತ್ರವು ಎಲ್ಲ ಶಾಸ್ತ್ರಗಳಿಗೂ ಉಪಕಾರಕಗಳಾಗಿವೆ ಎಂದು ಹೇಳಿದ್ದಾನೆ. ಋಗ್ವೇದದಲ್ಲಿನಮ್ಮ ಪ್ರಾಚೀನರು ಸೌರಮಂಡಲದಲ್ಲಿರುವ ಗ್ರಹಗಳ ಉಲ್ಲೇಖ, ಭೂಮಿಯ ಗುರುತ್ವಾಕರ್ಷಣಬಲ ಇತ್ಯಾದಿಗಳ ಬಗ್ಗೆ ನಿಖರವಾಗಿ ತಿಳಿಸಿದ್ದಾರೆ. ನಮ್ಮ ಪ್ರಾಚೀನರು ಸಸ್ಯ ಹಾಗೂ ಪ್ರಾಣಿಗಳನ್ನು ಅವುಗಳ ಗುಣವನ್ನಾವಲಂಬಿಸಿ ವರ್ಗೀಕರಣ ಮಾಡಿ ಅದಕ್ಕಾಗಿಯೇ ಅಶ್ವಶಾಸ್ತ್ರ, ಗಜಶಾಸ್ತ್ರ, ವೃಕ್ಷಾಯುರ್ವೇದಃಎಂಬಗ್ರಂಥವನ್ನು ರಚಿಸಿದ್ದಾರೆ. ಇವುಗಳೆಲ್ಲವು ಸಂಸ್ಕೃತ ಭಾಷೆಯಲ್ಲಿದ್ದು, ವಿಜ್ಞಾನಕ್ಕೆ ಕೊಡುಗೆಯಾಗಿವೆ ಎಂದು ತಿಳಿಸಿದರು.



ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸದಲ್ಲಿ ಮಹಾರಾಣಿ ವಿಜ್ಞಾನ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಡಿ. ಶೀಲಾಕುಮಾರಿ ಮಾತನಾಡಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್. ಸೋಮಶೇಖರ್ ಮಾತನಾಡಿ, ಸಂಸ್ಕೃತ ಎಂದರೆ ವಿಜ್ಞಾನ. ಸಂಸ್ಕೃತ ಭಾಷೆಯಲ್ಲಿ ಎಲ್ಲ ವಿಷಯಗಳು ಅಡಕವಾಗಿವೆ. ಕುರುಕ್ಷೇತ್ರದಲ್ಲಿನಡೆಯುತ್ತಿದ್ದ ಎಲ್ಲ ಸಂಗತಿಗಳನ್ನು ಸಂಜಯನು ತನ್ನ ದೂರದೃಷ್ಟಿಯ ಮೂಲಕ ರಾಜನಾದ ಧೃತರಾಷ್ಟ್ರನಿಗೆ ವಿವರಿಸುತ್ತಿದ್ದನು. ಪ್ರಾಚೀನಕಾಲದಲ್ಲಿಭಾಸ್ಕರಚಾರ್ಯರು ತನ್ನ ಮಗಳಾದ ಲೀಲಾವತಿಯ ಹೆಸರನ್ನು ಲೀಲಾವತಿಗಣಿತ ಎಂಬ ಗ್ರಂಥವನ್ನು ರಚಿಸಿ, ಅದರಲ್ಲಿರುವ ಜ್ಯೋತಿಷ್ಯದ ಮಹತ್ವವನ್ನು ತಿಳಿಸಿದರು ಎಂದು ಹೇಳಿದರು.

ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ. ಮಹದೇವಪ್ಪ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಸ್ಕೃತ ಭಾಷೆಯು ವ್ಯವಹಾರಿಕ ಭಾಷೆಯಾಗಿ ಬಳಕೆಯಾಗಬೇಕು. ಅದರ ಮಹತ್ವವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಸಂಸ್ಕೃತ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ವಿದ್ಯಾರ್ಥಿಗಳು ಸಂಸ್ಕೃತಾಧ್ಯಯನಕ್ಕೆ ಒತ್ತು ಕೊಟ್ಟು, ನಿತ್ಯೋಪಯೋಗಿ ಭಾಷೆಯನ್ನಾಗಿ ಬಳಸಬೇಕು ಎಂದು ಹೇಳಿದರು.

ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ. ವಿಶ್ವನಾಥ್ ಸ್ವಾಗತಿಸಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾದ ಕಾವ್ಯ ವಂದಿಸಿದರು. ಗುರುಕುಲದ ಸಾಧಕರು ಮತ್ತು ಪಿಯುಸಿ ವಿದ್ಯಾರ್ಥಿಗಳು ವೇದಘೋಷಮಾಡಿದರು. ಸಂಸ್ಕೃತ ವಿಭಾಗದ ಉಪನ್ಯಾಸಕಿ ಡಾ. ಎಂ.ಎಸ್. ಕೋಮಲ ನಿರೂಪಿಸಿದರು. ಮಾತೃಗೀತೆಯೊಂದಿಗೆ ಮುಕ್ತಾಯವಾಯಿತು.

ವಿಜಯ ವಾಣಿ 29-12-2018

# ಸಂಸ್ಕೃತದಲ್ಲಿ ಎಲ್ಲ ವಿಷಯಗಳು ಅಡಕ



ಮೈಸೂರಿನ ಜೆಎಸ್ಎಸ್ ಕಾಲೇಜಿನಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕಿ ಮೀನಾ ಕುಮಾರಿ ಮಾತನಾಡಿದರು.

ಮೈಸೂರು: ಪ್ರಪಂಚಾದ್ಯಂತ ಉಪಯೋಗಿಸುತ್ತಿರುವ ಭಾಷೆಗಳಲ್ಲಿ ಸಂಸ್ಕೃತ ಭಾಷೆಯು ಒಂದಾಗಿದ್ದು, ಕ್ರಿಸ್ತ ಪೂರ್ವದಿಂದಲೂ ತನ್ನ ಸ್ಥಾನಮಾನ ಉಳಿಸಿಕೊಂಡು ಬಂದಿದೆ ಎಂದು ಮಹಾರಾಣಿ ವಿಜ್ಞಾನ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕಿ ಡಾ.ಡಿ.ಶೀಲಾಕುಮಾರಿ ಹೇಳಿದರು.

ಬಿ.ಎನ್.ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ಸಂಸ್ಕೃತೋತ್ಸವ ಮತ್ತು ಉಪನ್ಯಾಸದಲ್ಲಿ ಮಾತನಾಡಿದರು.

ವಿಜ್ಞಾನ ಎಂದರೆ ವಿಶೇಷ ಜ್ಞಾನ. ವಿಜ್ಞಾನವು ವೇದಗಳ ಕಾಲದಿಂದಲೂ ಬಳಕೆಯಲ್ಲಿದೆ. ಪಾಣಿನಿಯ ವ್ಯಾಕರಣ ಸೂತ್ರಗಳು ಹೇಗೆ ಉಲ್ಲೇಖವಾಗಿದೆಯೋ ಹಾಗೆ ಯಥಾವತ್ತಾಗಿ ಇಂದಿಗೂ ಬಳಕೆಯಲ್ಲಿವೆ. ತರ್ಕಶಾಸ್ತ್ರದ ಪಿತಾಮಹನಾದ ಕಣಾದ ಮಹರ್ಷಿ ವ್ಯಾಕರಣ ಹಾಗೂ ತರ್ಕಶಾಸ್ತ್ರವು ಎಲ್ಲ ಶಾಸ್ತ್ರಗಳಿಗೂ ಉಪಕಾರಕಗಳಾಗಿವೆ ಎಂದರು

ಪ್ರಾಂಶುಪಾಲ ಎಸ್.ಸೋಮಶೇಖರ್ ಮಾತನಾಡಿ, ಸಂಸ್ಕೃತ ಎಂದರೆ ವಿಜ್ಞಾನ. ಸಂಸ್ಕೃತ ಭಾಷೆಯಲ್ಲಿ ಎಲ್ಲ ವಿಷಯಗಳು ಅಡಕವಾಗಿವೆ ಎಂದರು. ಪ್ರಾಂಶುಪಾಲ ಪ್ರೊ.ಎಂ.ಮಹದೇವಪ್ಪ ಮಾತನಾಡಿ, ಸಂಸ್ಕೃತ ಭಾಷೆಯು ವ್ಯವಹಾರಿಕ ಭಾಷೆಯಾಗಿ ಬಳಕೆಯಾಗಬೇಕು. ಸಂಸ್ಕೃತ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಎಂದು ತಿಳಿಸಿದರು..